ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು : "ಖಂಡ 2 ಮತ್ತು 3 ಹಾಗೂ ಅನುಸೂಚಿಗಳು ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಮತ್ತು ಅನುಸೂಚಿಗಳು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಹಣಕಾಸು ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1996ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಅಂಗೀಕರಿಸುವುದು"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

(3) ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕ, 1996

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ಧರಾಮಯ್ಯ (ಹಣಕಾಸು ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ನೇ ಸಾಲಿನ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಇದು ಕಾನ್ಸಿಕ್ವೆನ್ಷಿಯಲ್ ಅಮೆಂಡ್‌ಮೆಂಟ್ ಆಗಿರುವುದರಿಂದ ಮಾನ್ಯ ಸದಸ್ಯರು ಇದಕ್ಕೆ ಒಪ್ಪಿಗೆ ನೀಡಬೇಕೆಂದು ಕೋರುತ್ತೇನೆ. ತರಿಗೆ ರಿಪ್ಪಿಕ್ಷ ಮಾಡುವ ಬಗ್ಗೆ ಈ ಅಮೆಂಡ್‌ಮೆಂಟ್ ತಂದಿದ್ದೇವೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ,

"1996ನೇ ಸಾಲಿನ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 7ರವರೆಗೆ

ಅಧ್ಯಕ್ಷರು : "ಖಂಡ 2ರಿಂದ 7ರವರೆಗೆ ಹಾಗೂ ಅನುಸೂಚಿಗಳು ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 7ರವರೆಗೆ ಹಾಗೂ ಅನುಸೂಚಿ ವಿಧೇಯಕದ ಭಾಗವಾಗಿರುತ್ತದೆ)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಹಣಕಾಸು ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ನೇ ಸಾಲಿನ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1996ನೇ ಸಾಲಿನ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ಅಧ್ಯಕ್ಷರು : ಇವತ್ತು ಕಡೆ ದಿವಸ ಆಗಿರುವುದರಿಂದ ಕೆಲವು ಸದಸ್ಯರು ಬಂದು ಒಂದೆರಡು ಬಹಳ ಗಂಭೀರವಾದ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿದ್ದರು. 1.30ರವರೆಗೆ ಸರ್ಕಾರದ ಪರವಾಗಿ ಯಾರಾದರೂ ಒಬ್ಬರು ಜವಾಬ್ದಾರಿಯಿಂದ ಕೂಳಿತುಕೊಳ್ಳಿ. ಸದಸ್ಯರ ಭಾವನೆಗಳಿಗೆ ಸ್ಪಂಧಿಸುವಂತಹ ಕೆಲಸ 1.30 ರವರೆಗೆ ಮಾಡಿ 1.30ಕ್ಕೆ ಊಟಕ್ಕೆ ಅಡ್ಜರ್ನ್ ಮಾಡೋಣ. ನಂತರ ನಿಯಮ ಆದಾರದ ಮೇರೆಗಿನ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಪ್ಪರ್ ಕೃಷ್ಣ ಅದು ಕೂಡ ಇಂಪಾರ್ಟೆಂಟ್.

ಅಧ್ಯಕ್ಷರು : ಅಪ್ಪರ್ ಲಂಚ್ ತೆಗೆದುಕೊಳ್ಳೋಣ. 1.30ಕ್ಕೆ ಊಟಕ್ಕೆ ಅಡ್ಜರ್ನ ಮಾಡೋಣ ಸನ್ಮಾನ್ಯ ಪ್ರತಿ ಪಕ್ಷದ ನಾಯಕರಿಗೆ ಮತ್ತು ಇತರ ಸದಸ್ಯರಿಗೆ ನಾನು ಏನು ಹೇಳುತ್ತೇನೆಂದರೆ 1.30 ರವರೆಗೆ ಇವರಿಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡೋಣ 4-5 ವಿಚಾರ ನನ್ನ ಗಮನಕ್ಕೆ ತಂದಿದ್ದಾರೆ, ಈ ವಿಚಾರಗಳು ಪ್ರಸ್ತಾಪವಾದ ಮೇಲೆ 1.30ಕ್ಕೆ ಲಂಚಗೆ ಅಡ್ಜರ್ನ್ ಮಾಡೋಣ. ಮತ್ತೆ ಪುನಃ 2.30ಕ್ಕೆ ಸೇರಿದಾಗ ಅಪ್ಪರ್ ಕೃಷ್ಣದು ಡಿಸ್ಕಷನ್‌ಗೆ ತೆಗೆದುಕೊಂಡು ಕೊನೆಯಲ್ಲಿ ಬಿಲ್ ತೆಗೆದುಕೊಳ್ಳೋಣ.

ಅಧ್ಯಕ್ಷರ ಅಪ್ಪಣೆಗೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. ದಿನಾಂಕ 7.3.96ರಂದು ತುರುವೇಕೆರೆಯಲ್ಲಿ ನಡೆದ ಘಟನೆ.

+ಶ್ರೀ ಹೆಚ್. ಬಿ. ನಂಜೇಗೌಡ (ತುರುವೇಕೆರೆ) : ಸನ್ಮಾನ್ಯ ಸಭಾಧ್ಯಕ್ಷರೆ, 7.3.1996ರಂದು ನನ್ನ ಕ್ಷೇತ್ರದಲ್ಲಿ ನಡೆದ ಘಟನೆ ಬಗ್ಗೆ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಹೇಮಾವತಿ ಜಲಾಶಯದಿಂದ ನಮ್ಮ ತಾಲ್ಲೂಕಿನ 2-3 ಕೆರೆಗಳನ್ನು ತುಂಬಿಸಿತ್ತು, ಆ ಒಂದು ಮಲ್ಲಾಗಟ್ಟೆ ಕೆರೆಯಿಂದ ಅಚ್ಚುಕಟ್ಟುಗಾರರಿಗೆ ಈಗಾಗಲೇ ನೀರಿನ ಸರಬರಾಜು ಮಾಡಿದೆ. ಸರಬರಾಜು ಮಾಡಿ, ಅಲ್ಲಿರತಕ್ಕಂತಹ ರೈತರು ಆ ಒಂದು ಪ್ರದೇಶದಲ್ಲಿ ಈಗಾಗಲೇ ಭತ್ತದ ಭೆಳೆಯನ್ನು ಬೆಳೆದಿದ್ದರು. ನಾವು ಡಿಸೆಂಬರ್ 19ನೇ ತಾರೀಖು ನೀರಾವರಿ ಸಲಹಾ ಸಮಿತಿಯಿಂದ ಒಂದು ಸಭೆಯನ್ನು ಕರೆದು ಎಮ್.ಎ.ಇಲಾಖೆಯಿಂದ ಈ ಭಾಗದಲ್ಲಿ ಬರತಕ್ಕಂತಹ ರೈತರು ಮೂರು ತಿಂಗಳ ಬೆಳೆಯನ್ನು ಮಾತ್ರ ಹಾಕಿ, ಆ ಬೆಳೆಯನ್ನು ತಮ್ಮ ಹಿತಕ್ಕೆ ತೆಗೆದುಕೊಳ್ಳಬೇಕೆಂದು ಸಲಹೆ ಕೊಟ್ಟರತಕ್ಕಂತಹ ವಿಷಯ ಕೂಡ ಈ ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಇಚ್ಛೆಪಡುತ್ತೇನೆ. ಆ ಪ್ರಸ್ತಾವನೆಯಲ್ಲಿ ಆ ಭಾಗದ ರೈತರನ್ನು ಕರೆದು ನಾವು ಅವರಿಗೆ ತಿಳುವಳಿಕೆ ಕೊಟ್ಟಿದ್ದವು. ಆ ರೀತಿ ಆ ರೈತರು ನಡೆದುಕೊಳ್ಳುತ್ತಿದ್ದರು. ನಿನ್ನೆ ದಿವಸ ಅಲ್ಲಿ ನಡೆದಂತಹ ಘಟನೆಯಲ್ಲಿ ಒಬ್ಬ ಕಾಂಗ್ರೆಸ್ ಮುಂಖಿಡರು ಕೆಲವು ದುಷ್ಕರ್ಮಿಗಳನ್ನು ತೆಗೆದುಕೊಂಡು ಹೋಗಿ ಅವರಿಗೆ ಪ್ರಚೋದನೆ ಮಾಡಿ ಮಲ್ಲಾಗಟ್ಟಿ ಕೆರೆಯಿಂದ ಬರುತ್ತಾ